# ದಿ ಜಮಖಂಡಿ ಅರ್ಬನ್ ಕೋ-ಆಪರೇಟಿವ್ಹ್ ಬ್ಯಾಂಕ ಲಿ., ಜಮಖಂಡಿ

ಉಮಾರಾಮೇಶ್ವರ ರೋಡ, ಜಮಖಂಡಿ-587301

ಉಲ್ಲೇಖ ನಂ.　　　　　　　　　　　　　　　　ದಿನಾಂಕ : 10/02/2026

ಗೆ,
ಸಹಾಯಕ ಪ್ರಧಾನ ವ್ಯವಸ್ಥಾಪಕರು/ವ್ಯವಸ್ಥಾಪಕರು/ಸಹಾಯಕ ವ್ಯವಸ್ಥಾಪಕರು/ಶಾಖಾ ವ್ಯವಸ್ಥಾಪಕರು
ಮುಖ್ಯ ಕಛೇರಿ/ಬನಹಟ್ಟಿ/ಗಲಗಲಿ/ಗಿರೀಶ ನಗರ/ರಬಕವಿ/ಮುಧೋಳ/ಲೋಕಾಪುರ/ಮಹಿಳಾ/ತೊದಲಬಾಗಿ/
ಅಥಣಿ/ಮುನವಳ್ಳಿ/ವಿಜಯಪುರ/ಯಾದವಾಡ/ಬಾಗಲಕೋಟೆ/ಬಸವನ ಬಾಗೇವಾಡಿ ಶಾಖೆ

The Jamkhandi Urban Co-operative Bank Ltd. Jamkhandi

ವಿಷಯ : ಸಾಲಗಳ ಮೇಲಿನ ಬಡ್ಡಿದರಗಳನ್ನು ಪರಿಷ್ಕೃತಗೊಳಿಸಿರುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಈ ಮೂಲಕ ತಮಗೆ ತಿಳಿಯಪಡಿಸುವುದೇನೆಂದರೆ, ದಿನಾಂಕ 31/01/2026 ರಂದು ಜರುಗಿದ ನಿರ್ದೇಶಕ ಮಂಡಳಿ ಸಭೆಯ ಗೊತ್ತುವಳಿ ಕ್ರಮಾಂಕ 51(1) ರ ಪ್ರಕಾರ ಪ್ರಸ್ತುತದಲ್ಲಿರುವ ಸಾಲಗಳ ಮೇಲಿನ ಬಡ್ಡಿದರಗಳನ್ನು ಪರಿಷ್ಕೃತಗೊಳಿಸುವ ವಿಷಯದ ಬಗ್ಗೆ ಚರ್ಚಿಸಿ, ಈ ಕೆಳಕಂಡಂತೆ ಸಾಲಗಳ ಮೇಲಿನ ಬಡ್ಡಿದರಗಳನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಪರಿಷ್ಕೃತಗೊಳಿಸಲು ಸಭೆಯಲ್ಲಿ ಒಮ್ಮತದಿಂದ ನಿರ್ಧರಿಸಿರುತ್ತಾರೆ. ಆದ್ದರಿಂದ ಬ್ಯಾಂಕಿನ ಮುಖ್ಯ ಕಛೇರಿಯ ಹಾಗೂ ಎಲ್ಲಾ ಶಾಖೆಗಳ ಶಾಖಾ ವ್ಯವಸ್ಥಾಪಕರು ಸದರಿ ಪರಿಷ್ಕೃತ ಬಡ್ಡಿದರಗಳನ್ನು ಅನ್ವಯಿಸಿಕೊಂಡು ಸಾಲ ವಿತರಣೆ ಮಾಡಲು ಈ ಮೂಲಕ ಸೂಚಿಸಲಾಗಿದೆ.

**ಸಾಲಗಳ ಮೇಲೆ ಆಕರಣೆ ಮಾಡುವ ಪರಿಷ್ಕೃತ ಬಡ್ಡಿದರಗಳು**

| ಕ್ರ.ಸಂ | ವಿವರ | ಪ್ರಸ್ತುತದಲ್ಲಿರುವ ಬಡ್ಡಿದರಗಳು | ಪರಿಷ್ಕೃತ ಬಡ್ಡಿದರಗಳು |
|---|---|---|---|
| 1. | ಬಂಗಾರದ ಆಭರಣಗಳ ಮೇಲಿನ ಸಾಲ | 10.80 % | 11.50 % |
| 2. | ಮುದ್ದತ್ ಸಾಲ | 14 % | 15 % |
| 3. | ವೇತನ ಆಧಾರಿತ ಸಾಲ | 14 % | 15 % |
| 4. | ಅಲ್ಪಾವಧಿ ಸಾಲ | 14 % | 15 % |
| 5. | ತೋರ ಅಡಮಾನ ಸಾಲ | 14 % | 15 % |
| 6. | ಕ್ಯಾಶ್ ಕ್ರೆಡಿಟ್ ಸಾಲ | 13 % | 14 % |
| 7. | ವಾಹನ/ಮಶೀನರಿಗಳ ಮೇಲಿನ ಸಾಲ | 12.50 % | 13.50 % |
| 8. | ಹಳೆ ವಾಹನಗಳ ಮೇಲಿನ ಸಾಲ | 14 % | 15 % |
| 9. | ವಾಸದ ನಿವೇಶನ ಖರೀದಿ, ಮನೆ ಕಟ್ಟಡ ನಿರ್ಮಾಣ/ಖರೀದಿ ಸಾಲ | | |
| | ರೂ.25,00,000/- ಗಳ ವರೆಗೆ | 10.80 % | 12 % |
| | ರೂ.25,00,000/- ಮೇಲ್ಪಟ್ಟು | 11.40 % | 12.50 % |
| | ವಾಣಿಜ್ಯ ಕಟ್ಟಡ ನಿರ್ಮಾಣ/ಖರೀದಿ | | |
| | ರೂ.25,00,000/- ಗಳ ವರೆಗೆ | 11.40 % | 12.50 % |
| | ರೂ.25,00,000/- ಮೇಲ್ಪಟ್ಟು | 11.80 % | 13 % |

<u>ವಿ.ಸೂ :</u>

1) ಕ್ಯಾಶ್ ಕ್ರೆಡಿಟ್ ಸಾಲ ಪಡೆದ ಸದಸ್ಯರು ಪ್ರತಿ ತಿಂಗಳು ಬಡ್ಡಿ ತುಂಬುವವರಿಗೆ ಬಡ್ಡಿದರದಲ್ಲಿ ಪ್ರತಿಶತ 0.50% ರಿಯಾಯತಿ ಇರುತ್ತದೆ.
2) ಈ ಮೇಲಿನ ಪರಿಷ್ಕೃತ ಬಡ್ಡಿದರಗಳು ಹೊಸದಾಗಿ ಸಾಲ ವಿತರಣೆ ಮಾಡಿದ ಸಾಲದ ಖಾತೆಗಳಿಗೆ ಮಾತ್ರ ಅನ್ವಯಿಸುತ್ತವೆ.
3) ಸದರಿ ಸಾಲಗಳ ಮೇಲಿನ ಪರಿಷ್ಕೃತ ಬಡ್ಡಿದರಗಳು ದಿನಾಂಕ 11/02/2026 ರಿಂದ ಅನ್ವಯಿಸುತ್ತವೆ.

ಪ್ರಧಾನ ವ್ಯವಸ್ಥಾಪಕರು

Scanned with CamScanner